# ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 35 ಮಭಾಬ 2009(P) ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:25-5-2009.

## ಸುತ್ತೋಲೆ

ಜೂನ್ ತಿಂಗಳ 12ನೇ ದಿನಾಂಕವನ್ನು ವಿಶ್ವ ಬಾಲಕಾರ್ಮಿಕರ ವಿರೋಧಿ ದಿನವೆಂದು ಆಚರಿಸಲಾಗುತ್ತಿದೆ. ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವುದೇ ಇದರ ಉದ್ದೇಶವಾಗಿರುತ್ತದೆ. ಈ ದಿನವನ್ನು ವಿಶ್ವದಲ್ಲಿ ಬಾಲಕಾರ್ಮಿಕ ವಿರೋಧಿ ಅಂದೋಲನ ಎಂದು ಸ್ಮರಿಸಲಾಗುತ್ತಿದೆ. ವಿಶ್ವದಾದ್ಯಂತ ಬಾಲಕಾರ್ಮಿಕ ವಿರೋಧಿ ದಿನವನ್ನು, ಬಾಲಕಾರ್ಮಿಕ ಮಕ್ಕಳನ್ನು ಸೇರಿಸಿ ಇವರಿಗೆ ಸಹಾಯ ಹಸ್ತ ನೀಡುವುದು, ಶಾಲೆ, ಸಮುದಾಯ ಚಟುವಟಿಕೆ, ಕಲಾ ಪ್ರದರ್ಶನದಿಂದ ನಾಟಕಗಳ ಮೂಲಕ ಹಾಗೂ ಶಿಬಿರಗಳ ಮುಖಾಂತರ ಕಾರ್ಮಿಕರು ಮತ್ತು ಉದ್ಯೋಗಸ್ಥರಿಂದ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುತ್ತದೆ. ಚುನಾಯಿತ ಪ್ರತಿನಿಧಿಗಳಿಂದ ಸಮ್ಮೇಳನಗಳನ್ನು ನಡೆಸಿ ಹೊಸ ನಿಯಮಾವಳಿಗಳ ಬಗ್ಗೆ ವಿಧಾನಸಭೆಗಳಲ್ಲಿ ಮಂಡಿಸಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಹಾಗೂ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರತಿಜ್ಞೆ ತೆಗೆದುಕೊಳ್ಳಲಾಗುತ್ತಿದೆ.

`ಸರ್ವರಿಗೂ ಶಿಕ್ಷಣ` ಹಾಗೂ `ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ` ಇವೆರಡೂ ಒಂದಕ್ಕೊಂದು ಬೆಸೆದುಕೊಂಡಿರುತ್ತದೆ. ಒಂದು ಹಂತದ ವಯಸ್ಸಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವುದರಿಂದ ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟಬಹುದು. ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ವಿದ್ಯಾಭ್ಯಾಸದ ಅವಕಾಶವಿಲ್ಲದಿರುವಾಗ ಬಾಲಕಾರ್ಮಿಕ ಪದ್ಧತಿಗೆ ಸೇರ್ಪಡೆಯಾಗಿ ಶೋಷಣೆಗೆ ಒಳಗಾಗುವ ಸ್ಥಿತಿ ಉಂಟಾಗುತ್ತದೆ.

ಬಾಲಕಾರ್ಮಿಕರು ಹೆಚ್ಚಿನ ಸಮಯ ಕಾರ್ಮಿಕ ವೃತ್ತಿಯಲ್ಲಿಯೇ ಇರುವುದರಿಂದ ಮಕ್ಕಳಿಗೆ ಶಾಲೆಗೆ ಹೋಗಿ ವಿದ್ಯಾಭ್ಯಾಸ ಪಡೆಯಲು ಸಾಧ್ಯವಿರುವುದಿಲ್ಲ. ಕೆಲಸದ ಜೊತೆಗೆ, ಸರಿಯಾಗಿ ವಿದ್ಯಾಭ್ಯಾಸ ಕಾಲ ಕಾಲಕ್ಕೆ ಶಾಲೆಗಳನ್ನು ಅರ್ಧದಲ್ಲಿಯೇ ತೊರೆಯುತ್ತಾರೆ. ಮಕ್ಕಳು ಶಾರೀರಿಕವಾಗಿ, ಮಾನಸಿಕವಾಗಿ ತೊಂದರೆಗೊಳಗಾಗಿದ್ದು ಅನಕ್ಷರತೆ ಹಾಗೂ ಬಡತನ ಅವರಿಗೆ ಶತ್ರುವಾಗಿದೆ.

ವಿಶ್ವದಾದ್ಯಂತ 100 ದಶಲಕ್ಷ ಹೆಣ್ಣುಮಕ್ಕಳು ಬಾಲಕಾರ್ಮಿಕ ಪದ್ಧತಿಯಲ್ಲಿದ್ದಾರೆಂದು ಲೆಕ್ಕಾಚಾರ ಮಾಡಲಾಗಿದೆ. ಹೆಣ್ಣುಮಕ್ಕಳು ಅತಿ ಹೆಚ್ಚಿನ

....2

ರೂಪಿಸಿ ಅನುಷ್ಠಾನದ ಬಗ್ಗೆ ಅನುಬಂಧಕ್ಕೆ ಲಗತ್ತಿಸಿದ ನಮೂನೆಯಂತೆ ಮಾಹಿತಿಯನ್ನು ನೀಡುವುದು.

(ಡಾ:ಡಿ.ಎಸ್.ಅಶ್ವಥ್) 26/5/09
ಸರ್ಕಾರದ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಗೆ:-

1) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
2) ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3) ಎಲ್ಲಾ ಜಿಲ್ಲೆಗಳ ಮಹಿಳಾ ಅಭಿವೃದ್ಧಿ ಅಧಿಕಾರಿಗಳು/ನಿರೂಪಣಾಧಿಕಾರಿಗಳು.
4) ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ನಿರ್ದೇಶಕರ ಮುಖಾಂತರ)

ಪ್ರತಿ ಮಾಹಿತಿಗಾಗಿ:

1) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು,
2) ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

# ಅನುಬಂಧ

ದಿನಾಂಕ: 12-6-2009ರಂದು ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆಯನ್ನು ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಆಚರಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ವಿಶೇಷ ಸಭೆಯನ್ನು ನಡೆಸಿ ಈ ಕೆಳಕಂಡಂತೆ ತಾಯಂದಿರಿಂದ ಹಾಗೂ ಗ್ರಾಮದ ಸ್ತ್ರೀಶಕ್ತಿ ಗುಂಪಿನ ಸದಸ್ಯರಿಂದ ದೃಢ ಸಂಕಲ್ಪ ಪಡೆಯಬೇಕಾಗಿದೆ.

ದೃಢಸಂಕಲ್ಪ (ಕರಡು) " ------------------- ಗ್ರಾಮದ ತಾಯಂದಿರ ಸಮಿತಿಯ/ಬಾಲವಿಕಾಸ ಸಮಿತಿಯ ಸದಸ್ಯರಾದ, ಸ್ತ್ರೀಶಕ್ತಿ ಗುಂಪುಗಳ ಸದಸ್ಯರಾದ ನಾವು ವಿಶ್ವ ವ್ಯಾಪ್ತಿ ಪ್ರಾಥಮಿಕ ಶಿಕ್ಷಣಕ್ಕೆ ಬದ್ಧರಾಗುತ್ತ ಕಾಲಮಿತಿ ರೀತಿಯಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನಗೊಳಿಸುತ್ತೇವೆ. ಬಾಲಕಾರ್ಮಿಕ ಪದ್ಧತಿಯಿಂದ ಅತೀ ತೊಂದರೆಗೊಳಗಾಗಿದ್ದ ಹೆಣ್ಣುಮಕ್ಕಳ ಬಗ್ಗೆ ಹೆಚ್ಚು ಗಮನ ಹರಿಸುತ್ತೇವೆ. ಪೋಷಕರಿಗೆ ಅದರಲ್ಲೂ ತಾಯಂದಿರಿಗೆ ಪರಿಣಾಮಕಾರಿಯಾದ ವಿಶ್ವವ್ಯಾಪಿ ಪ್ರಾಥಮಿಕ ಶಿಕ್ಷಣ, ಶಾಲಾ ಪೂರ್ವ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡುವ ಬಗ್ಗೆ ಬಾಲಕಾರ್ಮಿಕರ ಪದ್ಧತಿಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ, ಒಳ್ಳೆಯ ವಿದ್ಯಾಭ್ಯಾಸ ಪಡೆಯುವಂತೆ ಹಾಗೂ ಅಂಗನವಾಡಿಗೆ ದಾಖಲಿಸಿ (ಪೌಷ್ಠಿಕ ಆಹಾರ, ಚುಚ್ಚುಮದ್ದು ಹಾಗೂ ಶಾಲಾಪೂರ್ವ ಶಿಕ್ಷಣವನ್ನು ಪಡೆಯಲು) ಎಲ್ಲಾ ಮಕ್ಕಳನ್ನು ಅಂಗನವಾಡಿ ಕೇಂದ್ರದಲ್ಲೇ 5 ವರ್ಷದವರೆಗೆ ಉಳಿಸಿಕೊಳ್ಳುವ ಬಗ್ಗೆ ತಿಳಿಸುತ್ತೇವೆ. ಹಾಗೂ 5 ವರ್ಷ 10 ತಿಂಗಳ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಕಳುಹಿಸುವಂತೆ ತಾಯಂದಿರನ್ನು ಪ್ರೇರೇಪಿಸುತ್ತೇವೆ".

## ಅನುಬಂಧ - 2

# ಉಸ್ತುವಾರಿ/ಮೌಲ್ಯಮಾಪನ (MONITORING FORMAT)

| ಅಂಗನವಾಡಿಯ ಹೆಸರು, ಗ್ರಾಮ, ತಾಲ್ಲೂಕು, ಜಿಲ್ಲೆ | ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಆಚರಿಸಲಾಗಿದೆಯೇ? ಠರಾವನ್ನು ಮಾಡಲಾಗಿದೆಯೇ? | ಎಷ್ಟು ಜನ ಭಾಗವಹಿಸಿದ್ದರು | ಎಷ್ಟು ಮಂದಿ ಪೋಷಕರಿಗೆ ತಮ್ಮ ಮಕ್ಕಳನ್ನು ಅಂಗನವಾಡಿಗೆ ದಾಖಲಿಸಲು ಮಾರ್ಗದರ್ಶನ ನೀಡಲಾಗಿದೆ | ಎಷ್ಟು ಮಕ್ಕಳನ್ನು ಅಂಗನವಾಡಿ ಕೇಂದ್ರಕ್ಕೆ ವಾಪಸ್ಸು ಕರೆಸಲಾಗಿದೆ. ಹಾಗೂ ಹೊಸದಾಗಿ ಎಷ್ಟು ಮಕ್ಕಳನ್ನು ದಾಖಲಿಸಲಾಗಿದೆ. | ಎಷ್ಟು ಗೈರು ಹಾಜರಾಗುವ ಮಕ್ಕಳನ್ನು ಅಂಗನವಾಡಿ ಕೇಂದ್ರಕ್ಕೆ ಹಾಜರಾಗುವಂತೆ ಮಾಡಲಾಗಿದೆ | ಸಲಹೆ ಮತ್ತು ಮಾರ್ಗದರ್ಶನ ನೀಡಿದ ನಂತರ ಎಷ್ಟು ಮಕ್ಕಳನ್ನು ಪೋಷಕರು ಬಾಲಕಾರ್ಮಿಕತೆಯಿಂದ ಬಿಡಿಸಿ ಶಾಲೆಗೆ ದಾಖಲಿಸಿದ್ದಾರೆ | ಎಷ್ಟು ಅಂಗನವಾಡಿ ಕೇಂದ್ರಗಳಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಬಗ್ಗೆ ಕ್ರಿಯಾ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. |
|---|---|---|---|---|---|---|---|
| | | | | | | | |

ಮೊದಲನೇ ವರದಿ ದಿನಾಂಕ:

ಎರಡನೇ ವರದಿ ದಿನಾಂಕ:

ನಂತರ ಆರು ತಿಂಗಳಿಗೊಮ್ಮೆ ವರದಿ: